INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -2, March-April, 2023,
PageNo,37-43
Peer -Reviewed, Refereed Journal

# ರಾಮನಗರ ಜಿಲ್ಲೆಯ ಜೈನ ನೆಲೆಗಳು– ಒಂದು ಅವಲೋಕನ

ಎಸ್.ಬಿ. ಬೋರೇಗೌಡ.[1]

ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಸುಮಾರು 50 ಕಿ.ಮೀ ದೂರದಲ್ಲಿರುವ ರಾಮನಗರವು ಕರ್ನಾಟಕ ರಾಜ್ಯದ 29ನೇ ಜಿಲ್ಲೆಯಾಗಿ 23–08–2007 ರಂದು ಅಸ್ತಿತ್ವಕ್ಕೆ ಬಂದಿತು. ಈ ಮೊದಲು ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಒಂದಾಗಿತ್ತು. ರಾಮನಗರವು ಜಿಲ್ಲಾ ಕೇಂದ್ರವಾದ ಮೇಲೆ ಚನ್ನಪಟ್ಟಣ, ರಾಮನಗರ, ಮಾಗಡಿ ಮತ್ತು ಕನಕಪುರ ತಾಲ್ಲೂಕುಗಳನ್ನು ಹೊಂದಿದೆ. ರಾಮನಗರ ಎಂಬುದಾಗಿ 1946ರ ಸುಮಾರಿನಲ್ಲಿ ಹೆಸರಿಡುವುದಕ್ಕಿಂತ ಮೊದಲು ಈ ಪ್ರದೇಶವನ್ನು ಕ್ಲೋಸ್‌ಪೇಟೆ ಎಂದು ಕರೆಯಲಾಗುತ್ತಿತ್ತು. ದಿವಾನ್ ಪೂರ್ಣಯ್ಯರವರಿಂದ ಸ್ಥಾಪಿತವಾದ ಈ ನಗರಕ್ಕೆ ಹಳೇ ಮೈಸೂರಿನ ರೆಸಿಡೆಂಟ್ ಆಗಿದ್ದ ಸರ್ ಬ್ಯಾರಿಕ್ಲೋಸ್ ಎಂಬುವರ ಗೌರವಾರ್ಥ 1800–1801ರಲ್ಲಿ ಕ್ಲೋಸ್‌ಪೇಟ್ ಎಂದು ಹೆಸರಿಟ್ಟ ಬಗ್ಗೆ ರಾಮನಗರದ ಶಾಸನ ತಿಳಿಸುತ್ತದೆ. ಭೌಗೋಳಿಕವಾಗಿ ಕರ್ನಾಟಕದ ರಾಜಧಾನಿ ಬೆಂಗಳೂರು ಹಾಗೂ ನಾಡಿನ ಸಾಂಸ್ಕೃತಿಕ ರಾಜಧಾನಿ ಮೈಸೂರು ನಗರಗಳನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿಯಲ್ಲಿ ರಾಮನಗರ ಸ್ಥಾನೀಕರಣಗೊಂಡಿದೆ.

ರಾಮನಗರ ಎಂಬ ಹೆಸರು ಬರುವ ಇತಿಹಾಸದ ಬಗ್ಗೆ ವಿವಿಧ ಕಾಲಘಟ್ಟಗಳಲ್ಲಿ ಈ ಪ್ರದೇಶವನ್ನು ಕೆಳಗಲಿ, ನಾಡರ್ಗಲ್ಲು, ಕೆಳ್ಗಲಿನಾಡು, ಕಿಳಲೈನಾಡು, ಕಲುವಳಿನಾಡು, ಶಿವರಾಗಿರಿ, ರಾಮಗಿರಿ, ರಾಮದುರ್ಗ, ಹೊಸಪೇಟೆ ಮುಂತಾದ ಹೆಸರುಗಳಿಂದ ಗುರುತಿಸಿರುವ ಬಗ್ಗೆ ಉಲ್ಲೇಖಗಳಿವೆ. ಪ್ರಸ್ತುತ ರಾಮನಗರ ಜಿಲ್ಲೆ ಉತ್ತರದಲ್ಲಿ ಶಿವಗಂಗೆ ಬೆಟ್ಟದ ಬುಡದಿಂದ ದಕ್ಷಿಣದಲ್ಲಿ ಕಾವೇರಿ ನದಿಯ ಮೇಕೆದಾಟುವರೆಗೂ, ಪಶ್ಚಿಮದಲ್ಲಿ ಮಂಡ್ಯ, ತುಮಕೂರು ಜಿಲ್ಲೆಯ ಗಡಿಯಿಂದ ಪೂರ್ವದಲ್ಲಿ ಬೆಂಗಳೂರು ಜಿಲ್ಲೆ ಮತ್ತು ತಮಿಳುನಾಡಿನ ಗಡಿವರೆಗೂ ವಿಸ್ತರಿಸಿದೆ. ಈ ಜಿಲ್ಲೆಯ ಒಟ್ಟು ವಿಸ್ತೀರ್ಣ 3575.58 ಚ.ಕಿ.ಮೀ ಆಗಿದ್ದು ಪ್ರಸ್ತುತ ಜಿಲ್ಲಾ ವ್ಯಾಪ್ತಿಯಲ್ಲಿ 4 ವಿಧಾನ ಸಭಾ ಕ್ಷೇತ್ರಗಳು 22 ಜಿಲ್ಲಾ ಪಂಚಾಯಿತಿ, 18 ಹೋಬಳಿಗಳು, 826 ಗ್ರಾಮಗಳಿದ್ದು 69776 ಹೆಕ್ಟೇರ್ ಅರಣ್ಯ ಪ್ರದೇಶ, 355914

[1].ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ

ಹೆಕ್ಟೇರ್ ವ್ಯವಸಾಯದ ಭೂಮಿ ಇದೆ. ಈ ಜಿಲ್ಲೆಯು 68 ಕಿ.ಮೀ ರಾಷ್ಟ್ರೀಯ ಹೆದ್ದಾರಿಯನ್ನು ಮತ್ತು 46 ಕಿ.ಮೀ. ರೈಲ್ವೆ ಮಾರ್ಗವನ್ನು ಹೊಂದಿದೆ.

ರಾಮನಗರವು ಶಿಲಾಯುಗದ ಕಾಲದಿಂದಲೂ ಮಾನವನ ವಾಸಕ್ಕೆ ಯೋಗ್ಯವಾಗಿತ್ತು. ಅಂದರೆ ಮಾಗಡಿ ತಾಲ್ಲೂಕಿನ ವಿರೂಪಪುರ, ಸಾವನದುರ್ಗ, ಗುಡ್ಡಹಳ್ಳಿ, ಗವಿನಾಗಮಂಗಲ, ಅಜ್ಜನಹಳ್ಳಿ, ಕಲ್ಯಾ, ಅಂಕನಪಾಳ್ಯ ಮೊದಲಾದ ಸ್ಥಳಗಳಲ್ಲಿ ಬೃಹತ್ ಶಿಲಾಗೋರಿಗಳನ್ನು ಪತ್ತೆಹಚ್ಚಲಾಗಿದೆ. ರಾಮನಗರ ಜಿಲ್ಲೆಯ ಜನರ ಸಂಸ್ಕೃತಿಯನ್ನು ಸಿಂಧೂ ಕೊಳ್ಳದ ಸಂಸ್ಕೃತಿಯ ಕಾಲಕ್ಕೆ ಕೊಂಡೊಯ್ಯುತ್ತಾರೆ ಫಾದರ್ ಹೆರಾಸ್‌ರವರು. ರಾಮನಗರ ಜಿಲ್ಲೆಯು ಐತಿಹಾಸಿಕವಾಗಿ ಹಲವಾರು ಅಂಶಗಳನ್ನು ಒಳಗೊಂಡಿದೆ. ಅಖಂಡ ಭಾರತವನ್ನು ಆಳ್ವಿಕೆ ನಡೆಸಿದ ಮೌರ್ಯ ಸಾಮ್ರಾಜ್ಯದ ಮೊದಲೇ ನಂದ ವಂಶದ ವಿಜಯಸಾಲನೆಂಬುವನ್ನು ಚನ್ನಪಟ್ಟಣದ ಬಳಿ ಮಾಕುಂದ ಪಟ್ಟಣವನ್ನು ಸ್ಥಾಪಿಸಿದ ಎಂಬ ಐತಿಹ್ಯವಿದೆ. ಅಂತರಾಷ್ಟೀಯ ಮಾರುಕಟ್ಟೆಯಲ್ಲಿ ಹೆಸರು ಮಾಡಿರುವ ರಾಮನಗರ ಜಿಲ್ಲೆಯು ಗ್ರಾನೈಟ್, ರೇಷ್ಮೆ, ಮಾವಿನಹಣ್ಣು ಮತ್ತು ಚನ್ನಪಟ್ಟಣದ ಗೊಂಬೆಗಳು ಈ ಜಿಲ್ಲೆಯ ವಾಣಿಜ್ಯ ವ್ಯವಹಾರಕ್ಕೆ ಭದ್ರಬುನಾದಿಯಾಗಿವೆ. ಇಂತಹ ಜಿಲ್ಲೆಯಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು ಹಾಗೂ ಮೈಸೂರು ಒಡೆಯರು ಆಳ್ವಿಕೆ ನಡೆಸಿರುವುದನ್ನು ಕಾಣಬಹುದಾಗಿದೆ.

ಗಂಗರು ಈ ಪ್ರದೇಶವನ್ನಾಳಿದ್ದು ಈ ಜಿಲ್ಲೆ ಗಂಗವಾಡಿ 96000ದ ಭಾಗವಾಗಿತ್ತು. ಮೊದಲನೆಯ ಶಿವಮಾರ (679–726) ಚನ್ನಪಟ್ಟಣ ತಾಲ್ಲೂಕಿನ ಮಂಕುಂದವನ್ನು ರಾಜ್ಯಾಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಇದರೊಂದಿಗೆ ಜಿಲ್ಲೆಯ ಇತಿಹಾಸ ಆರಂಭವಾಗುತ್ತದೆ. ಕನಕಪುರ ಮತ್ತು ಚನ್ನಪಟ್ಟಣ ಪ್ರಾಂತ್ಯದ ಕೆಲವು ಪ್ರದೇಶಗಳನ್ನೊಳಗೊಂಡ ಸೀಗಲನಾಡಿಗೆ ಕನಕಪುರ ಸಮೀಪದ ಅರಳಾಳು ರಾಜಧಾನಿಯಾಗಿತ್ತೆಂಬುದಕ್ಕೆ ಶಾಸನಾಧಾರಗಳಿವೆ. ರಾಮನಗರದ ಐಜೂರಿನ ಶಾಸನದಲ್ಲಿ ಗಂಗನೀತಿಮಾರ್ಗನ ವೀರ ಸ್ವರ್ಗದ ಉಲ್ಲೇಖವಿದೆ. ಕ್ರಿ.ಶ. 907ರಲ್ಲಿ ಚಂದ್ರಲಬ್ಬೆಯ ಮಗನಾದ ಎರೆಯಂಗ ಇಮ್ಮಡಿ ನೀತಿಮಾರ್ಗನ ಹೆಸರಿನಲ್ಲಿ ಗಂಗವಾಡಿಯಲ್ಲಿ ಆಳ್ವಿಕೆ ನಡೆಸಿದನು. ಇದಕ್ಕೆ ಕನಕಪುರ ತಾಲ್ಲೂಕಿನ ಯಳಚಗೆರೆ ಮತ್ತು ಸಾತನೂರುಗಳ ಶಾಸನಾಧಾರಗಳಿವೆ.

ಚೋಳರ ಕಾಲಕ್ಕೆ ರಾಮನಗರ ಜಿಲ್ಲೆ ಮುದಿಗೊಂಡ ಚೋಳಮಂಡಲದ ಭಾಗವಾಗಿತ್ತು. ಇದರಲ್ಲಿ ಕಳಲೆನಾಡು, ಸೀಗಲನಾಡು, ರಾಜೇಂದ್ರಚೋಳನಾಡು ಮುಂತಾದ ಉಪ ವಿಭಾಗಗಳಿದ್ದವು. ಚನ್ನಪಟ್ಟಣ ಸಮೀಪದ ಮಣಲೂರು ಅಥವಾ ಮಳೂರಿಗೆ ನಿಕರಲಿ ಚೋಳಪುರಂ ಎಂಬ ಹೆಸರಿತ್ತು. ಮಾಗಡಿ ಚೋಳ ದೊರೆಯೊಬ್ಬನಿಂದ ಸ್ಥಾಪನೆಗೊಂಡ ಬಗ್ಗೆ ಐತಿಹ್ಯವಿದೆ. ರಾಮನಗರ ಜಿಲ್ಲೆಯಲ್ಲಿ ಹೊಯ್ಸಳರ ಆಡಳಿತ ನಿಚ್ಚಳವಾಗಿದ್ದು ಹಲವಾರು ಶಾಸನಾಧಾರಗಳು ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ದೊಡ್ಡ

ಗಂಗವಾಡಿಯ ಶಾಸನದಲ್ಲಿ ಹೊಯ್ಸಳರ ರಾಮನಾಥನ ದಾಳಿಯನ್ನು ತಿಳಿಸಲಾಗಿದೆ. ಕನಕಪುರದ ಅಚ್ಚಲು, ಬಾಳೆಪುರ, ಚಿಕ್ಕಬಳಿಗೆರೆ, ಮಳವಳ್ಳಿ, ಕಬ್ಬಾಳು, ನಲ್ಲಹಳ್ಳಿ ಮುಂತಾದ ಸ್ಥಳಗಳಲ್ಲಿ ಹೊಯ್ಸಳರ ಪ್ರಭಾವ ಬೀರುವ ಶಾಸನಗಳಿವೆ.

ವಿಜಯನಗರದ ಮೂಲ ಸ್ಥಾಪಕರಾದ ಹರಿಹರ ಸಹೋದರರು ರಾಮನಗರ ಮಾಗಡಿಯ ಸೀಮೆಯ ಮೂಲದವರೆಂಬ ವಿಚಾರವನ್ನು ಡಾ. ಎಂ.ಜಿ. ನಾಗರಾಜ್‌ರವರು ಶಾಸನಾಧಾರಗಳಿಂದ ವಾದ ಮಂಡಿಸಿದ್ದಾರೆ. ಆನಂತಪುರ ಅಗ್ರಹಾರ ಸ್ಥಾಪನೆ ಆಂಧ್ರದ ಪಾಲ್ಕುರಿಕೆ ಸೋಮನಾಥ ಕಲ್ಯಾನ ಭೇಟಿ, ಶ್ರೀಶೈಲ ಪೀಠದ ಮಠಗಳು, ಗಜಗಾರಗುಪ್ಪೆಯಲ್ಲಿ ಹಾಳಾಗಿರುವ ಹರಿಹರ ಗಟ್ಟಿಗೆ, ಬುಕ್ಕರಾಯನ ಕಲ್ಯಾ ಧರ್ಮಶಾಸನ, ವಿಠಲನಾಥನಿಂದ ಕಲ್ಯಾ ಕೆರೆ ನಿರ್ಮಾಣ ಮುಂತಾದ ವಿಚಾರಗಳು ಹರಿಹರ ಬುಕ್ಕರು ಈ ಜಿಲ್ಲೆಯವರೆಂಬ ವಾದವನ್ನು ಬೆಂಬಲಿಸುತ್ತವೆ. ಈ ನಾಡಿನಲ್ಲಿ ಹೊಮ್ಮಳಿಗೆನಾಡು, ಸೀಗಲನಾಡು, ಎಲಹಂಕನಾಡು, ಚನ್ನಪಟ್ಟಣರಾಜ್ಯ, ಅರಾಳಹಾಳುರಾಜ್ಯ ಮೊದಲಾದವು ಅಂತರ್ಗತವಾಗಿದ್ದು ಅನೇಕ ಸಾಮಂತ, ಮಾಂಡಲಿಕ ಅಧಿಕಾರಗಳು ಆಳ್ವಿಕೆ ನಡೆಸುತ್ತಿದ್ದರು ಎಂಬುದನ್ನು ಶಾಸನಗಳು ತಿಳಿಸುತ್ತವೆ. ಇವರ ನಂತರದಲ್ಲಿ ಮೈಸೂರು ಒಡೆಯರು, ಹೈದರಾಲಿ ಮತ್ತು ಟಿಪ್ಪುಸುಲ್ತಾನ, ಬ್ರಿಟಿಷ್ ಅಧಿಕಾರಿಗಳ ಆಳ್ವಿಕೆಗೆ ಈ ಪ್ರದೇಶ ಒಳಗಾಗಿತ್ತು. ಟಿಪ್ಪುವಿನ ಕಾಲದಲ್ಲಿ ಚನ್ನಪಟ್ಟಣ ಮತ್ತು ರಾಮನಗರಗಳು ಪ್ರಮುಖ ಸೈನಿಕ ನೆಲೆಗಳಾಗಿದ್ದವು.

## ರಾಮನಗರ ಜಿಲ್ಲೆಯ ಜೈನ ನೆಲೆಗಳು:

ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವ ರಾಮನಗರ ಜಿಲ್ಲೆಯು ವಿವಿಧ ಧರ್ಮಗಳ ನೆಲೆಬೀಡಾಗಿದ್ದು ಹಿಂದೂ, ಇಸ್ಲಾಂ, ಕ್ರೈಸ್ತ, ಜೈನ ಮತ್ತು ಬೌದ್ಧ ಮುಂತಾದ ಧರ್ಮದವರು ಇಲ್ಲಿ ವಾಸಿಸುತ್ತಿದ್ದಾರೆ. ಉತ್ತರ ಭಾರತದಿಂದ ಮೌರ್ಯ ಚಕ್ರವರ್ತಿ ಚಂದ್ರಗುಪ್ತ ಮೌರ್ಯ ಹಾಗೂ ಆತನ ಗುರು ಭದ್ರಬಾಹು ಶ್ರವಣಬೆಳಗೊಳಕ್ಕೆ ಭೇಟಿ ನೀಡಿ ಅಲ್ಲೇ ಸಲ್ಲೇಖನ ವ್ರತ ಕೈಗೊಂಡ ಶಾಸನೊಲ್ಲೇಖ ಪ್ರಾಚೀನ ಕರ್ನಾಟಕದ ಜೈನ ಧರ್ಮ ಕುರಿತ ಪ್ರಥಮ ಉಲ್ಲೇಖ. ಇಂತಹ ಜೈನ ಧರ್ಮವು ರಾಮನಗರ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ತನ್ನದೆಯಾದ ಪ್ರಭಾವವನ್ನು ಹೊಂದಿತು. ಪ್ರಾಚೀನ ಕಾಲದಲ್ಲಿ ನಿಂಬೆ ಗ್ರಾಮ ಎಂದು ಕರೆಯಲ್ಪಟ್ಟ **ಕುಡಿಕೆ ಬೇವೂರು** ಜೈನ ಧರ್ಮದ ಪ್ರಧಾನ ಕೇಂದ್ರವಾಗಿತ್ತು. ಈ ಊರು ತಾಲ್ಲೂಕು ಕೇಂದ್ರವಾದ ಚನ್ನಪಟ್ಟಣದಿಂದ ಸುಮಾರು 13 ಕಿ.ಮೀ ದೂರದಲ್ಲಿದೆ. ಈ ಊರಿನಲ್ಲಿ ಗುಡಿ ಕೈಗಾರಿಕೆಗಳಿದ್ದು ಸಣ್ಣ ಸಣ್ಣ ಮಡಿಕೆಗಳನ್ನು (ಕುಡಿಕೆ) ಮಾಡುತ್ತಿದ್ದರು. ಇದರಿಂದ ಈ ಊರಿಗೆ ಕುಡಿಕೆ ಬೇವೂರು ಎಂದು ಹೆಸರಾಯಿತು. ಈ ಊರಿನ ಬಗ್ಗೆ ಕ್ರಿ.ಶ. 900 ರ ಶಾಸನದಲ್ಲಿ ಉಲ್ಲೇಖವಿದೆ. ಮಾಗಡಿಯ **ಕಲ್ಯಾ** ಮತ್ತೊಂದು ಜೈನ ಕೇಂದ್ರ. ಇದು ಮಾಗಡಿಯಿಂದ ಸುಮಾರು 5 ಕಿ.ಮೀ ದೂರದಲ್ಲಿದೆ. ಕಲ್ಯದ ಶಾಸನವು ಇದನ್ನು ಕಲಯ್ಯ ಎಂದು ಉಲ್ಲೇಖಿಸಿದೆ. ಇದು

ವಿಜಯನಗರ ಕಾಲದ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಮೊದಲಿಗೆ ಬುಕ್ಕರಾಯನ ಶಾಸನವು ಈ ಸ್ಥಳದಿಂದ ಬರುತ್ತದೆ. ಕ್ರಿ.ಶ. 1368 ರ ಶ್ರವಣಬೆಳಗೊಳ ಶಾಸನವು ಜೈನರಿಗೆ ಮತ್ತು ವೈಷ್ಣವರಿಗೂ ನಡೆದ ಧಾರ್ಮಿಕ ಕಲಹವನ್ನು ತಿಳಿಸುತ್ತದೆ. ಈ ಸಂದರ್ಭದಲ್ಲಿ ವಿಜಯನಗರದ ರಾಜನಾದ ಒಂದನೇ ಬುಕ್ಕರಾಯ ಜೈನ ಯತಿಗಳನ್ನು ಮತ್ತು ವೈಷ್ಣವ ಗುರುಗಳನ್ನು ಕರೆಸಿ ಜೈನ ಮತ್ತು ವೈಷ್ಣವರ ನಡುವಿನ ವೈಷಮ್ಯವನ್ನು ಬಗೆಹರಿಸಿದನೆಂದು ಈ ಶಾಸನ ತಿಳಿಸುತ್ತದೆ. ಕಲ್ಲೇಹ(ಕಲ್ಯ)ದ ಸುಮಂತ್ರಭದ್ರಸ್ವಾಮಿಯನ್ನು ಕುಮದೇಂದು ವಿರಚಿತ ಸಿರಿ ಭೂವಲಯ ಉಲ್ಲೇಖಿಸುತ್ತದೆ. ಇವನು ಶಿವಕೋಟ್ಯಾಚಾರ್ಯರ ಗುರು ಗಂಗ ಸಾಮ್ರಾಜ್ಯ ಸ್ಥಾಪನೆಗೆ ಸ್ಫೂರ್ತಿಯಾದ ಸಿಂಹನಂದಿ ಪೂರ್ವಾಧಿಕಾರಿ. ಇಲ್ಲಿ ಪಂಚ ಬಸದಿಗಳು, ಮಾನಸ್ತಂಭ, ಜಿನಶಿಲ್ಪಗಳು ಇಲ್ಲಿವೆ. **ಬಿಸ್ಕೂರು** ಮತ್ತೊಂದು ಜೈನ ಕೇಂದ್ರ. ಇದು ಮಾಗಡಿಯಿಂದ ಸುಮಾರು 12 ಕಿ.ಮೀ ದೂರದಲ್ಲಿದೆ. ಬಿಸ್ಕೂರು ಎಂಬಲ್ಲಿ 75 ಬಸದಿಗಳಿದ್ದು ಜೈನರ ಪ್ರಸಿದ್ಧ ಕೇಂದ್ರವಾಗಿತ್ತು.

ರಾಮನಗರ ಜಿಲ್ಲೆಯ ಮತ್ತೊಂದು ಪ್ರಮುಖ ಜೈನ ನೆಲೆಯೆಂದರೆ **ಸಂಘೀಘಟ್ಟ.** ಸಂಘೀಘಟ್ಟ ಎಂಬ ಪದವು ಸೆತ್ತೂರ್ ಘಟ್ಟ ಎಂಬುದರ ಮೂಲವಾಗಿದೆ. ಇಲ್ಲಿ ಸೆತ್ತೂರ್ ಎಂಬ ಜೈನ ಕುಟುಂಬ ವಾಸವಾಗಿದ್ದರು. ಈ ಕುಟುಂಬದವರಿಂದ ನಂತರದಲ್ಲಿ ಸಂಘೀಘಟ್ಟವಾಯಿತು. ಈ ಕುಟುಂಬದವರು ಇಲ್ಲಿ ಅನೇಕ ಜೈನ ಬಸದಿಗಳನ್ನು ನಿರ್ಮಿಸಿದರು. ಈ ಕುಟುಂಬ ಕಲೆಗೆ ತಮ್ಮನ್ನು ತೊಡಗಿಸಿ ಕೊಂಡಂತೆ ಸಾಹಿತ್ಯ ಕ್ಷೇತ್ರದಲ್ಲೂ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ. ಕನ್ನಡ ಜೈನ ಕವಿಯಾದ ಧರ್ಮಾಧಿಕಾರ ಚಿಕ್ಕ ಪದ್ಮಣ್ಣ ಸೆತ್ತೂರ್‌ರವರು ಅನಂತನಾಥ ಚರಿತೆ ಮತ್ತು ವಿಜಯ ಕುಮಾರ ಚರಿತೆ ಎಂಬ ಗ್ರಂಥವನ್ನು ರಚಿಸಿದ್ದಾರೆ. ಇಲ್ಲಿ ಹೊಯ್ಸಳ ರಾಜನಾದ ಒಂದನೇ ನರಸಿಂಹನು (1145–1173) ಪ್ರಸಿದ್ಧ ತೀರ್ಥಂಕರನಾದ ವರ್ಧಮಾನ ಮಹಾವೀರನ ಬಸದಿಯನ್ನು ನಿರ್ಮಿಸಿದ್ದಾನೆ. ಇಲ್ಲಿನ ವಿಗ್ರಹ ಚಿನ್ನದಿಂದ ಲೇಪಿತವಾಗಿದೆ. ಈ ರೀತಿಯ ವರ್ಣರಂಜಿತ ವಿಗ್ರಹ ಪ್ರಂಪಚದ ಯಾವುದೇ ಸ್ಥಳದಲ್ಲಿ ಕಂಡು ಬರುವುದಿಲ್ಲ. ಮಹಾವೀರನ ಚಿತ್ರದ ಹಿಂದಿನ ಒಂದು ಶಾಸನದಲ್ಲಿ ಹೊಯ್ಸಳರ ವಂಶಾವಳಿಯನ್ನು ತಿಳಿಸುತ್ತದೆ. ಅಂದರೆ ವಿನಯಾದಿತ್ಯನಿಂದ ಹಿಡಿದು ಒಂದನೇ ನರಸಿಂಹನವರೆಗೆ ಮಾಹಿತಿ ಇದೆ. ಇಲ್ಲಿ ಅನೇಕ ಜೈನ ಬಸದಿಗಳು ಇವೆ. ಜೈನ ಪೂರ್ವಾಚಾರ್ಯರಲ್ಲೊಬ್ಬರಾದ ಏಳಾಚಾರ್ಯ ಮುನಿಗಳನ್ನು ಸ್ತುತಿಸಿರುವ ಜಿನಸೇನ ಎಂಬ ಜೈನಮುನಿ ಸಂಕೀರ್ಣಘಟ್ಟದಲ್ಲಿ ವರ್ಧಮಾನ ಪುರಾಣವನ್ನು ರಚಿಸಿದನೆಂದು ಈ ಏಳಾಚಾರ್ಯನೇ ತಿರುಕ್ಕುರುಳ್ ಕವಿಯ ಗುರುವೆಂದು ಇವರು ಮಾಗಡಿ ಸೀಮೆಯವರೆಂದು ಸಂಶೋಧಕರಾದ ಡಾ. ಮುನಿರಾಜಪ್ಪ ತಿಳಿಸಿದ್ದಾರೆ.

**ಹೂಜಿಗಲ್ಲು** ಮತ್ತೊಂದು ಈ ಜಿಲ್ಲೆಯ ಜೈನ ಕೇಂದ್ರ. ಇದು ಹೊಯ್ಸಳರ ಕಾಲದ ಪ್ರಮುಖ ಕೇಂದ್ರವಾಗಿತ್ತು. 15ನೇ ಶತಮಾನದ ಸುಮಾರು 14ಕ್ಕೂ ಅಧಿಕ ಶಾಸನಗಳಲ್ಲಿ ಜೈನರ ಮರಣದ ಶಪಥವನ್ನು ಉಲ್ಲೇಖಿಸಲಾಗಿದೆ. ಇಲ್ಲಿನ ಒಂದು ಬಂಡೆಯು ಹಲವು ನಿಸಿದಿ ಶಾಸನಗಳನ್ನು ಹೊಂದಿದೆ.

ನಿಸಿದಿಯೆಂದರೆ ಸನ್ಯಾಸನ ವಿಧಿಯಿಂದ ಮಡಿದವರ ಸ್ಮಾರಕ. ಅಂದರೆ ವೀರರಿಗೆ ವೀರಗಲ್ಲು ಸ್ಥಾಪಿಸುವಂತೆ. ಕೆಲವು ಸ್ಮಾರಕಗಳನ್ನು ಇವರು ನಿಲ್ಲಿಸುತ್ತಿದ್ದರು ಇವುಗಳನ್ನು ನಿಸಿದಿಗಲ್ಲುಗಳೆಂದು ಕರೆಯುತ್ತಾರೆ. ಇವುಗಳು ಬಸದಿಗಳ ಮುಮದಿನ ಪ್ರತ್ಯೇಕ ಶಿಲಾಫಲಕಗಳಲ್ಲಿ, ಬಸದಿಯ ಕಂಬಗಳ ಮೇಲೆ, ಊರ ಹೊರಗಿನ ಹೊಲಗಳಲ್ಲಿ ನೆಟ್ಟ ಕಲ್ಲುಗಳಲ್ಲಿ, ಬಂಡೆಗಳ ಮೇಲೆ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಸನ್ಯಸನದ ಮಾತ್ರ ಹೇಳಿರಬಹುದು ಅಥವಾ ಅದರ ಜೊತೆಗೆ ಸ್ವೀಕರಿಸಿ ವ್ಯಕ್ತಿಯ ಚಿತ್ರವೂ ಇರಬಹುದು. ಸಾವನದುರ್ಗ, ಹರ್ತಿ ಸಂಘೀಘಟ್ಟ, ಸಾತನೂರು ಮುಂತಾದವುಗಳು ಜೈನ ಕೇಂದ್ರಗಳಾಗಿದ್ದವು ಜೈನಯತಿಗಳ ಧ್ಯಾನಕ್ಕೆ ತಂಗಲು ಹಾಗೂ ಸಲ್ಲೇಖನ ವ್ರತಕ್ಕೆ ಅನುಕೂಲಕರ ಭೌಗೋಳಿಕ ಪರಿಸರ ಈ ಜಿಲ್ಲೆಯಲ್ಲಿತ್ತು. ಇದೇ ತಾಲ್ಲೂಕಿನ ಬಿಸ್ಕೂರು ಎಂಬಲ್ಲಿ 75 ಬಸದಿಗಳಿದ್ದು ಇದು ಜೈನರ ಪ್ರಸಿದ್ಧ ಕೇಂದ್ರಗಳಲ್ಲಿ ಒಂದಾಗಿತ್ತು. ಕಲ್ಯಾದಲ್ಲಿದ್ದ ಪಂಚ ಬಸದಿಗಳು, ಮಾನಸ್ತಂಭ, ಜಿನಶಿಲ್ಪಗಳು ಇಲ್ಲಿವೆ. ಚನ್ನಪಟ್ಟಣದ ಬೇವೂರಿನಲ್ಲಿ ಜೈನಯತಿಗಳ ಸಂಘವಿದ್ದಿತು. ಇಲ್ಲಿನ ತಿಮ್ಮಪ್ಪನ ಬೆಟ್ಟಕ್ಕೆ ಸುವರ್ಣ ಬೆಟ್ಟ ಎಂತಲೂ ಕರೆಯುತ್ತಿದ್ದರು. ಗಂಗರು ಚನ್ನಪಟ್ಟಣದ ಮಾಕುಂದವನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡ ಮೇಲೆ ಜೈನ ಧರ್ಮದ ಬೆಳವಣಿಗೆಗೆ ಪ್ರೋತ್ಸಾಹ ಕೊಟ್ಟಿದ್ದರು.

12 ನೇ ಶತಮಾನದವರೆಗೆ ಜೈನ ಧರ್ಮ ಕರ್ನಾಟಕದ ಪ್ರಧಾನ ಧರ್ಮವಾಗಿ ರಾಜಕೀಯ ಆಶ್ರಯವನ್ನು ಪಡೆದಿತ್ತಲ್ಲದೆ ಶ್ರವಣಬೆಳಗೊಳ ಇಡೀ ಭಾರತದಲ್ಲೇ ಜೈನರ ಪ್ರಸಿದ್ಧ ದಿಗಂಬರ ಪರಂಪರೆಯ ಕೇಂದ್ರವಾಗಿತ್ತು. ಶ್ರವಣಬೆಳಗೊಳದ ಹೆಬ್ಬಾಗಿಲಿನಂತೆ ಮಾಗಡಿ ಅದರ ದಟ್ಟ ಕಾಡು, ಪ್ರಶಾಂತತೆ, ಆಕರ್ಷಣೆಗಳಿಂದ ಕೂಡಿದ್ದರಿಂದ ಇತರ ತಾಲ್ಲೂಕಿಗಳಿಗಿಂತ ಜೈನ ಧರ್ಮ ಇಲ್ಲಿ ಹೆಚ್ಚು ಪ್ರಭಾವಯುತವಾಗಿತ್ತು. ಇದನ್ನು ಬಿಟ್ಟರೆ ಚನ್ನಪಟ್ಟಣದ ಬೇವೂರು ನಿಂಬೆಗ್ರಾಮ ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಜೈನ ಧರ್ಮದ ಪ್ರಚಾರಕ್ಕಾಗಿ ಏಳಿಗೆಗೆ ಬಂದ ಜೈನ ಸಂಘಗಳನ್ನು ಕರ್ನಾಟಕದಲ್ಲಿ **'ಯಾಪನೀಯ'** ಸಂಘಗಳೆಂದು ಕರೆಯಲಾಗಿತ್ತು. ಜೈನ ಧರ್ಮದಲ್ಲಿ ಸಂಘಗಳು ಮುಖ್ಯ. ಇದರಲ್ಲಿ ಮೂಲಸಂಘ, ದ್ರಾವಿಡ ಸಂಘ, ನಂದಿಸಂಘ, ಯಾಪನೀಯ ಸಂಘಗಳು ಮುಖ್ಯ. ಇಂತಹ ಯಾಪನೀಯ ಸಂಘವು ರಾಮನಗರ ಜಿಲ್ಲೆಯ ಚನ್ನಪಟ್ಟಣದ ಕುಡಿಕೆ ಬೇವೂರಿನಲ್ಲಿ ಅಸ್ತಿತ್ವದಲ್ಲಿತೆಂಬ ವಿಚಾರವನ್ನು ಶಾಸನ ತಿಳಿಸುತ್ತದೆ. ಯಾಪನೀಯಕ್ಕೆ ಎರಡು ತುದಿಗಳು. ಶ್ವೇತಾಂಬರ ಒಂದು ತುದಿ, ದಿಗಂಬರ ಇನ್ನೊಂದು ಕೊನೆ. ಇವೆರಡರ ನಡುವೆ ನಿಂತ ಮಧ್ಯಮಾರ್ಗ ಯಾಪನೀಯ. ಯಾಪನೀಯ ಸಂಘ ಎಂಬ ಪದವು ಮಹಾವೀರನ ಜೀವಿತದ ಅವಧಿಯಲ್ಲೇ ಕಂಡು ಬಂದರು ಖಚಿತವಾಗಿ ಶಾಸನಗಳಲ್ಲಿ ಲಭ್ಯವಾದುದ್ದು ಕ್ರಿ. ಶ. 462–63 ರಲ್ಲಿ. ಕದಂಬರ ರಾಜನಾದ ಮೃಗೇಶವರ್ಮನ ಎಂಟನೇ ವಯಸ್ಸಿನಲ್ಲಿ ಇಂದಿನ ಹಲಸಿಯಲ್ಲಿ ಜಿನಾಲಯವನ್ನು ನಿರ್ಮಿಸಿ ಶಾಸನವನ್ನು ಬರೆಸಿದನು. ಈ ಶಾಸನದಲ್ಲಿ ಯಾಪನೀಯ ಸಂಘದ ಬಗ್ಗೆ ಮೊದಲ ಉಲ್ಲೇಖವಿದೆ. ಹೀಗೆ ರಾಮನಗರ ಜಿಲ್ಲೆಯಲ್ಲಿ ಜೈನ

ಧರ್ಮ ತನ್ನದೆಯಾದ ಪ್ರಭಾವವನ್ನು ಹೊಂದಿತ್ತು. ಅದರೆ ನಂತರದಲ್ಲಿ ರಾಜಕೀಯದಲ್ಲಿ ಬದಲಾವಣೆಯಾದಂತೆ ಇಸ್ಲಾಂ ಧರ್ಮದ ಸುಲ್ತಾನರು ಆಕ್ರಮಣಶೀಲ ಪ್ರವೃತ್ತಿ ಬೆಳಸಿಕೊಂಡರು. ಅಲ್ಲದೆ ಗಂಗರ ಕಾಲದಲ್ಲಿ ರಾಜಾಶ್ರಯದಿಂದ ಬೀಗುತ್ತಿದ್ದ ಜೈನ ಧರ್ಮ ಹೊಯ್ಸಳರ ಕಾಲಕ್ಕೆ ರಾಮಾನುಜಚಾರ್ಯರ ಪ್ರಭಾವದಿಂದ ಮುಗ್ಗರಿಸಿತು. ಕ್ಷಾತ್ರ ಧರ್ಮದ ಶ್ರೇಷ್ಟತೆಯನ್ನು ಸಾರುವ ವೈಷ್ಣವ ಧರ್ಮ ರಾಜಧರ್ಮವಾದ ಮೇಲೆ ಜೈನ ಧರ್ಮದ ಕಠೋರ ಸನ್ಯಾಸ ಹಾಗೂ ಮತ್ತಿತರ ಆಚರಣೆಗಳಿಂದಾಗಿ ಶೈವ, ವೈಷ್ಣವ ಪಂಥಗಳು ಪ್ರಬಲವಾದವು. ಇದರಿಂಧ ಜೈನ ಧರ್ಮ ಪೈಪೋಟಿ ನಡೆಸಲಾರದೆ ತತ್ತರಿಸಿತು. ತರುವಾಯ ಧಾರ್ಮಿಕ ಸಂಘರ್ಷಗಳು ಉಂಟಾದವು. ತೊಂಡನೂರು, ಕಲಶ, ಶತವಾಡಿ, ಹೆಡತಲೆ, ಮೇಲುಕೋಟೆ ಮುಂತಾದ ಸ್ಥಳಗಳಲ್ಲಿದ್ದ ಜಿನಾಲಯಗಳು ನಾಶವಾಗಿ ವೈಷ್ಣವ ದೇವಾಲಯಗಳಾದವು. 75 ಬಸದಿಗಳಿದ್ದ ಬಿಸ್ಕೂರಿನಲ್ಲಿ ಜೈನ–ಶೈವ ಸಂಘರ್ಷದ ಕುರುಹುಗಳು ಗೋಚರಿಸಿದರೆ, ಕಲ್ಯಾದಲ್ಲಿ ಉಂಟಾದ ಜೈನ–ವೈಷ್ಣವ ಸಂಘರ್ಷವನ್ನು ಮೊದಲನೆ ಬುಕ್ಕರಾಯ ಬಗೆಹರಿಸಿ ಧರ್ಮಸಮನ್ವಯ ಶಾಸನವನ್ನು ಜಾರಿಗೆ ತಂದನು. ತರುವಾಯ ಜೈನ ಧರ್ಮ ನಾಶವಾಗಲು ಕಾರಣವಾಯಿತು. ಇಷ್ಟಾದರೂ ಜೈನ ಧರ್ಮಿಯರು ರಾಮನಗರ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ವಿರಳವಾಗಿ ಇಂದಿಗೂ ಉಳಿದುಕೊಂಡಿದ್ದಾರೆ.

## ಆಧಾರ ಗ್ರಂಥಗಳು


1. ಶೇಷಶಾಸ್ತ್ರಿ.ಆರ್. – ಶಾಸನ ಪರಿಚಯ – ಬೆಂಗಳೂರು ಪ್ರಸಾರಾಂಗ,ಬೆಂಗಳೂರು. ವಿ.ವಿ 1982
2. ಡಾ. ಗೋಪಾಲ್ ಬಾ.ರಾ – ಕನ್ನಡ ಶಾಸನಗಳು ಧಾರವಾಡ ಪ್ರತಿಭಾ ಗ್ರಂಥಮಾಲೆ 1963
3. ಡಾ. ನರಸಿಂಹಮೂರ್ತಿ ಎ.ವಿ – ಕರ್ನಾಟಕ ಶಾಸನ ಮತ್ತು ಸಂಪತ್ತು ಬೆಂಗಳೂರು ಕನ್ನಡ ಸಂಸ್ಕೃತಿ ನಿರ್ದೇಶನಾಲಯ
4. ಡಾ. ದೇವರಕೊಂಡಾರೆಡ್ಡಿ – ಕರ್ನಾಟಕ ಶಾಸನಗಳು ಬೆಂಗಳೂರು, ಪ್ರಕಾಶ ಸಾಹಿತ್ಯ 1997
5. ಡಾ. ಕಲಬುರ್ಗಿ ಎಂ.ಎಂ – ಶಾಸನಸೂಕ್ತಿ ಸುಧಾರ್ಣವ, ಬೆಂಗಳೂರು ಕರ್ನಾಟಕ ಸಾಹಿತ್ಯ ಆಕಾಡಮಿ 1997
6. ಹಂಪ:ನಾಗರಾಜಯ್ಯ–ಯಾಪನೀಯ ಸಂಘ–ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ,ಹಂಪಿ,1999.
7. ಶಿವಸ್ವಾಮಿ ಜಿ.ವಿ.– ರಾಮನಗರ ತಾಲ್ಲೂಕಿನ ದರ್ಶನ ಬೆಂಗಳೂರು, ಐ.ಬಿ.ಎಚ್ ಪ್ರಕಾಶನ 1987
8. ಡಾ.ಚಿದಾನಂದಮೂರ್ತಿ ಎಂ – ಸಂಶೋಧನೆ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು 1984

9. ಡಾ. ಚಿದಾನಂದಮೂರ್ತಿ ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ. ಶ. 450–1150) ಮೈಸೂರು ಪ್ರಸಾರಂಗ 1966
10. ಸೂರ್ಯನಾಥ ಕಾಮತ್(ಸಂ) ಬೆಂಗಳೂರು ರೂರಲ್ ಡಿಸ್ಟ್ರಿಕ್ ಗೆಜಿಟಿಯರ್ ಬೆಂಗಳೂರು 1989
11. ಡಾ. ಮಂಜುನಾಥ್ ಸಿ.ಯು – ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (1150–1340) ಚಿತ್ಕಲಾ ಪ್ರಕಾಶನ– ಕುಪ್ಪಂ
12. ನಾಗಾರ್ಜುನ ಸಿ.ಎಲ್ (ಸಂ) ರಾಮನಗರ ವೈಜಯಂತಿ, ರಾಮನಗರ. ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸಮಿತಿ 1997
13. ಚಿಕ್ಕಪುಟ್ಟೇಗೌಡ ಮತ್ತು ಡಾ. ಮುನಿರಾಜಪ್ಪ (ಸಂ) ಕಟ್ಟಾಣಿ ( ಪ್ರಥಮ ಸಾಹಿತ್ಯ ಸಮ್ಮೇಳನದ ಜಿಲ್ಲಾದರ್ಶನ) ರಾಮನಗರ 2010
14. ಡಾ. ಮುನಿರಾಜಪ್ಪ – ಮಾಗಡಿ ಸೀಮೆಯ ಇತಿಹಾಸ
15. Epigraphia Carnatica valumes 1 to V Bangalore
16. Hayavadana Rao.C (Ed - Mysore Gazetter 5 Volus. Bangalore 1927-30
17. Bangalore Gazetter - Suryanath Kamat (Ed) Bangalore
18. Dr. Sheik Ali - History of Westren Gangas – Mysore prasaranga
19. South Indian inscriptions volumes - 1 to XV
20. Dr.Gopal R – Jainism Through the Ages- Directorate of Archaeology and Museums- 2011